ಹಮ್ಮುಬಿಮ್ಮು ಅಡ್ಡಬರಬಹುದು. ಆದರೆ, ಮೈಮನಗಳ ಸುಳಿಯಲ್ಲಿ ಸಿಲುಕಿಕೊಂಡಿರುವ ದಾಂಪತ್ಯ, ವಿರಹವನ್ನು ತಡೆದುಕೊಳ್ಳಲಾರದೇ ಪರಸ್ಪರ ಸೋತು ಮತ್ತೆ ಒಂದಾಗುತ್ತದೆ. ಆಗ ಮತ್ತೇ ಗಂಧ ತೀಡುತ್ತದೆ. ಗಂಡ ಹೆಂಡಿರ ಮಧ್ಯ ಮನಸ್ತಾಪಕ್ಕೆ ಕಾರಣವಾಗುವ ವಿಷಯಗಳಲ್ಲಿ ಮತ್ತೊಬ್ಬಳ ಪ್ರವೇಶ ಅಥವಾ ಆ ಕುರಿತು ಸಂಶಯ ಹೆಚ್ಚು ಉಲ್ಬಣವಾಗಬಹುದಾದ ಜಗಳದ ಮೂಲ. ನಮ್ಮ ಜನಪದ ಗರತಿ ಅಂತ ಸಂದರ್ಭದಲ್ಲಿ ತೋರುವ ಉದಾರ ಭಾವ ನೋಡಿ: ...ನಾ ಮುಚ್ಚಿ ಮುಡಿದ ಪರಿಮಳದ | ದಾ ಹೂವು ಅವಳೊಂದು ಗಳಿಗೆ ಮುಡಿಲೇಳು || ಎಂದು ತನ್ನ ಸಹನೆ ಶೀಲ ಗುಣವನ್ನು ಮೆರೆಯುತ್ತಾಳೆ. ಹಾಗೆಯೇ ಮತ್ತೊಬ್ಬಳು,'.... ತಂದರ ನೋಡು ಸವತೀನ....' ಎಂದು ಛೇಡಿಸುತ್ತಾಳೆ. ಅದು ಆ ಕಾಲಕ್ಕಾಯಿತು. ಈಗಾದರೆ ಭೂಮಿ ಆಕಾಶ ಒಂದಾಗಿ ದಾಂಪತ್ಯ ಅನ್ನುವುದು ಹಳ್ಳ ಹಿಡಿಯುತ್ತದೆ. ಹುಶಾರು! ಅದೇ ಅವಳು ಇನ್ನೊಬ್ಬನ ಕಡೆಗೆ ಕಣ್ಣು ಹಾಕಿದರೆ ಗಂಡು ಅವಳಂತೆ ಉದಾರ ಬುದ್ಧಿ ತೋರಬಲ್ಲನೇ. ಇದಕ್ಕೆ ಜನಪದರಲ್ಲಿ ಉತ್ತರಗಳಿಲ್ಲ. ಗಂಡಿನ ಹಕ್ಕುಸ್ವಾಮ್ಯ ಹೆಚ್ಚು. ಅದಕ್ಕೆ ಗಂಡಾಳಿಕೆಯ ಸಾಮಾಜಿಕ ವ್ಯವಸ್ಥೆ, ಕೌಟುಂಬಿಕ ಸಂರಚನೆ ಕಾರಣವಾಗಿರಲೂಬಹುದು. ಅಪವಾದವೆಂಬಂತೆ ಮಾಸ್ತಿಯವರು 'ವೆಂಕಟಿಗನ ಹೆಂಡತಿ' ಎಂಬ ತಮ್ಮ ಒಂದು ಕಥೆಯಲ್ಲಿ ಒಬ್ಬ ಸಾಮಾನ್ಯ ಕೂಲಿಕಾರ ಪತಿ, ತನ್ನ ಪತ್ನಿ ಬಗ್ಗೆ ತೋರುವ ವಿಶಾಲ ಮನೋಭಾವವನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ.

ನಮ್ಮ ಪೂರ್ವಜರು ಉದ್ದಕ್ಕೂ ನೋಡುತ್ತಾ ಆಡುತ್ತಾ ಬಂದ 'ಶ್ರೀ ಕೃಷ್ಣ ಪಾರಿಜಾತ' ಎಂಬ ಬಯಲಾಟ ಸತಿ, ಪತಿ, ಸವತಿ ಮತ್ಸರದ ಸರಸ ವಿರಸವನ್ನು ತುಂಬಾ ರಸವತ್ತಾಗಿ ಬಿಂಬಿಸುವ ಆಟ. ಅಲ್ಲಿ ಶ್ರೀ ಕೃಷ್ಣ, ರುಕ್ಮಿಣಿ, ಸತ್ಯಭಾಮಾರ ನಡುವಿನ ಕಲಹ ನಮ್ಮ ಜನಪದರನ್ನು ಉದ್ದಕ್ಕೂ ಪ್ರಭಾವಿಸಿದೆ. ಅದು ದೇವಮಾನವ ಶ್ರೀ ಕೃಷ್ಣನ ಲೀಲಾವತಾರದ ಕಥೆ. ಆ ಕಾಲದ್ದು. ಶ್ರೀಕೃಷ್ಣನಿಗೆ ಎಂಟು ಜನ ಪಟ್ಟದ ರಾಣಿಯರು, ಹದಿನಾರು ಸಾವಿರ ಇತರ ಸತಿಯರು ಇದ್ದರು. ನಮ್ಮ ರಾಜ ಮಹಾರಾಜರೆಲ್ಲ ಅನೇಕ ಪತ್ನಿವ್ರತಸ್ಥರು. ನಮ್ಮ ಮಹಾಭಾರತದ ದ್ರೌಪದಿ ಮಾತ್ರ ಸ್ವಯಂವರದ ಪತ್ನಿಯಾಗಿ ಐದು ಜನರ ಹೆಂಡತಿಯಾಗಿ ಬಾಳ ಬೇಕಾಯಿತು, ಬವಣೆ ಪಡಬೇಕಾಯಿತು. ಈಗ ಒಂದು ಗಂಡಿಗೆ ಒಂದು ಹೆಣ್ಣು ಸಿಗುವುದೇ ಕಷ್ಟವಾಗುತ್ತಿರುವಾಗ ಇನ್ನು ಹೆಚ್ಚಿನದನ್ನು ಬಯಸುವುದು ಮತ್ತು ತರುವುದು ಎಲ್ಲಿಂದ. ಕೃಷ್ಣನ ಜೊತೆ ಏಕಕಾಲಕ್ಕೆ ಎಂಟು ಜನ ಮಡದಿಯರು ಜಗಳಕ್ಕೆ ನಿಂತರೆ ಕೃಷ್ಣನ ಗತಿ ಏನು?

ಆದರೆ, ಇಬ್ಬರನ್ನು ಕಟ್ಟಿಕೊಂಡಿರುವ ನನ್ನ ಒಬ್ಬರು ಸ್ನೇಹಿತರ ಅನಿಸಿಕೆ, 'ಒಬ್ಬಳಿಗಿಂತ ಇಬ್ಬರೂ ಲೇಸು' ಎಂದು. ಗಂಡನ ಮನಸ್ಸನ್ನು ಗೆಲ್ಲಲು ಇಬ್ಬರು ಪ್ರಯತ್ನಿಸುತ್ತಿರುತ್ತಾರೆ, ಹೀಗಾಗಿ ಗಂಡನಿಗೆ ಒಂದಿಷ್ಟು ಬೆಲೆ ಇರುತ್ತದೆ ಎಂದು. ಅದು ಪ್ರಯೋಗ ಮಾಡಿ ನೋಡಬಹುದಾದ ವಿಷಯವೂ ಅಲ್ಲ. ಕಾನೂನು ಕಟ್ಟಳೆಗಳು ಬೇರೆ. ಕಾರಣಾಂತರಗಳಿಂದ ಇಬ್ಬರು ಹೆಂಡಂದಿರನ್ನು ಕಟ್ಟಿಕೊಂಡಿರುವವರ ಸಂಸಾರದ 'ಸುಖ' ವನ್ನೂ ನಾವು ಅಲ್ಲಲ್ಲಿ ನೋಡಬಹುದು.

ಒಂದು ಈಸೋಪನ ಕತೆಯಲ್ಲಿ ಇಬ್ಬರು ಹೆಂಡಿರನ್ನು ಕಟ್ಟಿಕೊಂಡ ಪತಿಯ ಪ್ರಸ್ತಾಪ ಬರುತ್ತದೆ. ಒಬ್ಬಳು ಹಿರಿಯಳು, ಇನ್ನೊಬ್ಬಳು ಕಿರಿಯಳು. ವಯಸ್ಸು ಆದಂತೆ ಗೃಹಸ್ಥನಿಗೆ ತಲೆಯಲ್ಲಿ ಬಿಳಿ ಕೂದಲು ಕಾಣಿಸತೊಡಗಿದವು. ಆತಂಕಗೊಂಡ ಕಿರಿಯ ಹೆಂಡತಿ ಗಂಡನ ತಲೆಯನ್ನು ತೊಡೆಯ ಮೇಲೆ ಇರಿಸಿಕೊಂಡು ಆಗಾಗ ಬಿಳಿಯ ಕೂದಲನ್ನು ಕಿತ್ತು ತೆಗೆಯುತ್ತಾಳೆ. ಇತ್ತ ಗಂಡನೊಡನೆ ವಯಸ್ಸಾಗುತ್ತ ಬಂದ ಹಿರಿಯ ಹೆಂಡತಿಯ ಕೂದಲು ಕೂಡಾ ನೆರೆಯುತ್ತ ಬಂತು. ತನ್ನ ಗಂಡನ ತಲೆ, ತನ್ನ ತಲೆಗೆ ಅನುರೂಪವಾಗಿದ್ದರೆ ಚನ್ನ ಎಂದು ಭಾವಿಸಿ ಸಮಯ ಸಿಕ್ಕಾಗಲೆಲ್ಲ ಗಂಡನ ಕಪ್ಪು ಕೂದಲನ್ನು ಕೀಳುತ್ತಾ ಬಂದಳು. ಇಬ್ಬರಿಗೂ ತಲೆ ಒಪ್ಪಿಸುತ್ತ ಬಂದ ಗಂಡನ ತಲೆ ಕೆಲ ದಿನಗಳಲ್ಲಿ ನುಣ್ಣಗೆ ಬೋಳಾಗಿತ್ತು. ಇಬ್ಬರು ಹೆಂಡಿರ ಸುಖ ಹೀಗೂ ಇರುತ್ತದೆ.

ಗಂಡ ಹೆಂಡತಿ ಮಧ್ಯದ ಒಂದು ಅತ್ಯಂತ ಸರಸಸಲ್ಲಾಪ, ಮುನಿಸಿನ ಉದಾಹರಣೆ ಎಂದರೆ ಮುದ್ದಣ-ಮನೋರಮೆಯರ ಸಲ್ಲಾಪ. ಮುದ್ದಣನ 'ಶ್ರೀರಾಮಾಶ್ವಮೇಧ' ಕಥೆಯನ್ನು ಸತಿಯೊಂದಿಗೆ ಸಲ್ಲಾಪ ನಡೆಸುತ್ತಾ ಮುಂದುವರಿಸುತ್ತಾನೆ. ಅದು ಪತಿ-ಪತ್ನಿಯರ ದಾಂಪತ್ಯದ ರಸೋಲ್ಲಾಸದ ದ್ಯೋತಕ. ಪತ್ನಿಯನ್ನು ಮುದ್ದಣ ಅದೆಷ್ಟು ಹೆಸರುಗಳಿಂದ